# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **787** |
| ಸದಸ್ಯರ ಹೆಸರು | : | ಡಾ: ಎಂ.ಜಿ. ಮುಳೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | **ಪ್ರಶ್ನೆ** | **ಉತ್ತರ** |
|---|---|---|
| ಅ) | ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಪದೇ ಪದೇ ವಿದ್ಯುತ್ ನಿಲುಗಡೆಯಾಗಿ ನಿರಂತರ ವಿದ್ಯುತ್ ತೊಂದರೆಯ ಕಾರಣ ಸಾರ್ವಜನಿಕರು ಹಾಗೂ ರೈತರು ತೀವ್ರ ಅಸಮಧಾನ ವ್ಯಕ್ತಪಡಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಈ ಕೆಳಕಂಡಂತೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.<br>• ನಿರಂತರ ಜ್ಯೋತಿಯಡಿ 23 :00 ರಿಂದ 24:00 ಗಂಟೆಗಳು<br>• ಗ್ರಾಮೀಣ ಮಿಶ್ರ ಫೀಡರ್‌ಗಳು :7 :00 ಗಂಟೆಗಳ 3 ಫೇಸ್ ಮತ್ತು ರಾತ್ರಿ ವೇಳೆ ಸಿಂಗಲ್ ಫೇಸ್<br>• ಪ್ರತ್ಯೇಕ ಕೃಷಿ ಫೀಡರ್ ಗಳು :7 :00 ಗಂಟೆಗಳ 3 ಫೇಸ್, ತೋಟದ ಮನೆಯಿರುವೆಡೆ ಸಂಜೆ 6 ರಿಂದ ಬೆಳಗ್ಗೆ 6 ರವರೆಗೆ ಸಿಂಗಲ್ ಫೇಸ್ ವಿದ್ಯುತ್<br><br>ಅನಿವಾರ್ಯ ಸಂದರ್ಭಗಳಲ್ಲಿ, ವಿದ್ಯುತ್ ಜಾಲದಲ್ಲಿ ಅಡಚಣೆ ಉಂಟಾದಾಗ ಮಾತ್ರ ತಾತ್ಕಾಲಿಕವಾಗಿ ಅಲ್ಪ ಪ್ರಮಾಣದಲ್ಲಿ ವಿದ್ಯುತ್ ಅಡಚಣೆಯುಂಟಾಗುತ್ತದೆ ಹಾಗೂ ಸದರಿ ಅಡಚಣೆಗಳನ್ನು ಸರಿಪಡಿಸಿ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಸಲು ESCOM ಗಳಲ್ಲಿ Comprehensive Feeder Maintenance, DTC Maintenance & Hazardous location rectification ಅಭಿಯಾನಗಳನ್ನು ಕೈಗೆತ್ತಿಕೊಳ್ಳಲಾಗುತ್ತಿರುತ್ತದೆ.<br><br>ಕವಿಪ್ರನಿನಿ ವತಿಯಿಂದ ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ಹೊಸ ವಿದ್ಯುತ್ ಉಪಕೇಂದ್ರಗಳು ಮತ್ತು ಪ್ರಸರಣ ಮಾರ್ಗಗಳನ್ನು ನಿರ್ಮಿಸುವ ಹಾಗೂ ಹಾಲಿ ಉಪಕೇಂದ್ರಗಳನ್ನು ಉನ್ನತೀಕರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿರುತ್ತದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ಆದಂತಹ ಪ್ರಕರಣಗಳೆಷ್ಟು; ಮತ್ತು ಕ್ರಮ ಕೈಗೊಂಡ ಪ್ರಕರಣಗಳೆಷ್ಟು; | ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಪದೇ ಪದೇ ವಿದ್ಯುತ್ ನಿಲುಗಡೆಯಾಗಿ ವಿದ್ಯುತ್ ತೊಂದರೆಯಾದ ಯಾವುದೇ ಪ್ರತ್ಯೇಕ ಪ್ರಕರಣಗಳು ವರದಿಯಾಗಿರುವುದಿಲ್ಲ. |

| | | |
|---|---|---|
| ಇ) | ರಾಜ್ಯದಲ್ಲಿನ ರೈತರು ಅಳವಡಿಸಿರುವ ಅಕ್ರಮ ಟ್ರಾನ್ಸ್‌ಫಾರ್ಮಾರ್ ಗಳನ್ನು ಸಕ್ರಮಗೊಳಿಸಲು ಸರ್ಕಾರ ಮುಂದೆ ಯೋಜನೆ ಇದೆಯೇ; ಇದ್ದಲ್ಲಿ, ಸಕ್ರಮಗೊಳಿಸಲು ಸ್ವೀಕರಿಸಿರುವ ಅರ್ಜಿಗಳೆಷ್ಟು; ಅವುಗಳಲ್ಲಿ ಎಷ್ಟು ವಿಲೇವಾರಿ ಮಾಡಲಾಗಿದೆ; ಉಳಿದ ಅರ್ಜಿಗಳನ್ನು ವಿಲೇವಾರಿ ಮಾಡದಿರಲು ಕಾರಣವೇನು; | ರೈತರ ನೀರಾವರಿ ಪಂಪ್‌ಸೆಟ್‌ಗಳನ್ನು ವ್ಯವಸ್ಥಿತವಾಗಿ ವಿದ್ಯುತ್ ಜಾಲಕ್ಕೆ ಸೇರ್ಪಡೆಗೊಳಿಸಲು ಮತ್ತು Solar off grid / Stand-alone ಪಂಪ್‌ಗಳನ್ನು ಅಳವಡಿಸುವ ಮೂಲಕ ಹಗಲಿನ ವೇಳೆಯಲ್ಲಿಯೇ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸುವ ಉದ್ದೇಶದಿಂದ ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/ ವಿಎಸ್‌ಸಿ/214/2023, ದಿನಾಂಕ:07.10.2023 ರಂದು ಹೊರಡಿಸಲಾಗಿದೆ. ಅದರಂತೆ,<br>1. ವಿದ್ಯುತ್ ಸರಬರಾಜು ಕಂಪನಿಗಳು ಸಕ್ರಮಗೊಳಿಸಿದ ಕೃಷಿ ಪಂಪ್ ಸೆಟ್ ಗಳಿಗೆ 2022-23 ಮತ್ತು 2023-24 ರಲ್ಲಿ ಟೆಂಡರ್ ಮೂಲಕ ಮೂಲಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಟೆಂಡರ್ ಕರೆಯಲಾದ ಅಂದಾಜುಪಟ್ಟಿಯನ್ನು ಪುನರ್ ಪರಿಶೀಲಿಸಿ, ಪಂಪ್ ಸೆಟ್ ಗಳು ಹಾಲಿ ಇರುವ ವಿದ್ಯುತ್ ಜಾಲದಿಂದ 500 ಮೀಟರ್ ಯಿಂದಾಚೆಯಿದ್ದಲ್ಲಿ, Solar Stand -alone /off grid ಪಂಪ್ ಅಳವಡಿಸಲು ಕ್ರಮವಹಿಸಲಾಗುತ್ತಿದೆ ಮತ್ತು 500 ಮೀಟರ್ ಒಳಗಿರುವ ಪಂಪ್‌ಸೆಟ್ ಗಳಿಗೆ ಕನಿಷ್ಟ ಅವಶ್ಯಕತೆಗೆ ತಕ್ಕಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿದ್ಯುತ್ ಸರಬರಾಜು ಕಂಪನಿಗಳು ಕ್ರಮವಹಿಸುತ್ತಿವೆ.<br>2. ಸೌರ ಪಂಪ್‌ಸೆಟ್ ಗಳನ್ನು ಉತ್ತೇಜಿಸಲು ಕೇಂದ್ರ ಸರ್ಕಾರದಿಂದ ಶೇ. 30 ರಷ್ಟು ಸಹಾಯಧನ ಅಲ್ಲದೆ ರಾಜ್ಯ ಸರ್ಕಾರದಿಂದ ಶೇ. 30 ರಷ್ಟು ಇರುವ ಸಹಾಯಧನವನ್ನು ಶೇ. 50 ಕ್ಕೆ ಹೆಚ್ಚಿಸಿ ಸರ್ಕಾರ ಅನುಮೋದಿಸಿದೆ. ರೈತರು ಈಗಾಗಲೇ ವಿದ್ಯುತ್ ಸಂಪರ್ಕಕ್ಕಾಗಿ ಮೊತ್ತವನ್ನು ಪಾವತಿಸಿದ್ದರೆ, ಪಾವತಿಸಿದ ಮೊತ್ತವನ್ನು ರೈತರ ವಂತಿಗೆ ಎಂದು ಪರಿಗಣಿಸಿ, ಸೌರ ಪಂಪ್‌ಸೆಟ್ ಗಳನ್ನು ಅಳವಡಿಸಬೇಕಾಗಿದೆ.<br>➢ ಇದಲ್ಲದೇ, ರೈತರಿಗೆ ಅನುಕೂಲ ಮಾಡಿಕೊಡಲು ದಿನಾಂಕ: 15.04.2025 ರಿಂದ ನವೀಕೃತ ಶೀಘ್ರ ಸಂಪರ್ಕ ಯೋಜನೆಯನ್ನು (NSSY) ಜಾರಿಗೊಳಿಸಲಾಗಿದ್ದು, ರೈತರು ಇಚ್ಛಿಸಿದಲ್ಲಿ HT/LT ಮಾರ್ಗಗಳ ವಿಸ್ತರಣೆಯ ಕಾಮಗಾರಿಯನ್ನು ತಮ್ಮ ಸ್ವಂತ ಖರ್ಚಿನಲ್ಲಿ ನಿರ್ವಹಿಸಿದ ನಂತರ (ರೂ.15,000/- ಮತ್ತು KERC ನಿಯಮಾವಳಿಗಳಂತೆ ಠೇವಣಿ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿ ಮಾಡುವುದರೊಂದಿಗೆ) ವಿದ್ಯುತ್ ಸರಬರಾಜು ಕಂಪನಿಗಳಿಂದ ಸೂಕ್ತ ಸಾಮರ್ಥ್ಯದ ಪರಿವರ್ತಕ ವನ್ನು (TC) 2 ಅಥವಾ ಹೆಚ್ಚಿನ ಸಂಖ್ಯೆಯ ಪಂಪ್‌ಸೆಟ್‌ಗಳನ್ನು ಒಟ್ಟುಗೂಡಿಸಿ ವಿದ್ಯುತ್ ಸಂಪರ್ಕ ನೀಡಲಾಗುವುದು. |
| ಈ) | ಕಳೆದ ಮೂರು ವರ್ಷಗಳಲ್ಲಿ ಎಷ್ಟು ಅಕ್ರಮ ಟ್ರಾನ್ಸ್‌ಫಾರ್ಮರ್‌ಗಳನ್ನು ಪತ್ತೆ ಮಾಡಲಾಗಿದೆ; ಅಕ್ರಮ-ಸಕ್ರಮ ಯೋಜನೆಯಲ್ಲಿ ಅರ್ಜಿ ಸಲ್ಲಿಸದಿರುವವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; | |
| ಉ) | ಅಕ್ರಮ-ಸಕ್ರಮಕ್ಕೆ ನಿಗದಿಪಡಿಸಲಾದ ಮೊತ್ತ ಎಷ್ಟು; ಎಷ್ಟು ಕಾಲಮಿತಿಯಲ್ಲಿ ಅಕ್ರಮ-ಸಕ್ರಮ ಯೋಜನೆಯನ್ನು ಪೂರ್ಣಗೊಳಿಸಲಾಗುವುದು? | |

| | | |
|---|---|---|
| | | ತಾಂತ್ರಿಕ ಸಾಧ್ಯತೆಯಿರುವಲ್ಲಿ, ಹಾಲಿ ಇರುವ ಎಲ್.ಟಿ ಜಾಲದಿಂದ service main ಮೂಲಕ ಅಥವಾ ಎಲ್.ಟಿ ಮಾರ್ಗ ವಿಸ್ತರಣೆಯೊಂದಿಗೆ ಸ್ವಯಂ ಕಾರ್ಯ ನಿರ್ವಹಣೆ ಅಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆಯುವ ರೈತರು ಸಹ ರೂ.15,000/- ಮತ್ತು ಠೇವಣಿ ಹಣ ಪಾವತಿಸುವುದು. ಅಂತಹ ರೈತರು ನವೀಕೃತ ಶೀಘ್ರ ಸಂಪರ್ಕ ಯೋಜನೆಯ ವ್ಯಾಪ್ತಿಗೆ ಒಳಪಡುವುದಿಲ್ಲ.<br><br>2005 ರಿಂದ 22.9.2023 ವರೆಗೆ ನೀರಾವರಿ ಪಂಪ್ ಸೆಟ್ ಮೂಲಸೌಕರ್ಯಕ್ಕಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಹಾಗೂ ಸಂಪರ್ಕ ನೀಡಿರುವ ಇತರ ಮಾಹಿತಿಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.<br><br>ಅಕ್ರಮವಾಗಿ ವಿದ್ಯುತ್ ಸಂಪರ್ಕ ಶಿಕ್ಷಾರ್ಹ ಅಪರಾಧ ಎಂದು ಗ್ರಾಹಕರಿಗೆ ಮನವರಿಕೆ ಮಾಡಿಕೊಡಲಾಗುತ್ತಿದೆ. ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆಯುವವರ ವಿರುದ್ಧ ನಿಯಾಮಾನುಸಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಎನರ್ಜಿ 195 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಎಂ.ಜಿ. ಮುಳೆ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 787 ಕ್ಕೆ ಅನುಬಂಧ

## ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ 2005 ರಿಂದ 22-09-2023 ರವರೆಗೆ ವಿದ್ಯುತ್ ಸಂಪರ್ಕ ಕೋರಿ ರೈತರಿಂದ ಸ್ವೀಕೃತಗೊಂಡಿರುವ ಅರ್ಜಿಗಳ ಕಂಪನಿವಾರು ವಿವರಗಳು

| ಕ್ರ. ಸಂ. | ಜಿಲ್ಲೆಗಳ ಹೆಸರು | 2005 ರಿಂದ 22-09-2023 ರವರೆಗೆ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಹಣ ಪಾವತಿಸಿರುವ ಅರ್ಜಿದಾರರ ಸಂಖ್ಯೆ | 31-07-2025 ರ ಅಂತ್ಯಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲಾಗಿರುವ ಕೃಷಿ ಪಂಪ್‌ಸೆಟ್‌ಗಳ ಸಂಖ್ಯೆ | ಮೂಲಭೂತ ಸೌಕರ್ಯ ಕಲ್ಪಿಸಲು 31-07-2025 ರ ಅಂತ್ಯಕ್ಕೆ ಬಾಕಿ ಇರುವ ಕೃಷಿ ಪಂಪ್‌ಸೆಟ್‌ಗಳ ಸಂಖ್ಯೆ |
|---|---|---|---|---|
| **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ** | | | | |
| 1 | ಬೆಂಗಳೂರು ನಗರ | 5,843 | 5,766 | 77 |
| 2 | ಬೆಂಗಳೂರು ಗ್ರಾಮೀಣ | 18,626 | 17,440 | 1,186 |
| 3 | ರಾಮನಗರ | 32,642 | 30,245 | 2,397 |
| 4 | ತುಮಕೂರು | 1,48,206 | 1,19,193 | 29,013 |
| 5 | ಕೋಲಾರ | 28,907 | 25,537 | 3,370 |
| 6 | ಚಿಕ್ಕಬಳ್ಳಾಪುರ | 30,504 | 27,287 | 3,217 |
| 7 | ದಾವಣಗೆರೆ | 76,619 | 58,312 | 18,307 |
| 8 | ಚಿತ್ರದುರ್ಗ | 75,386 | 48,747 | 26,639 |
| | ಒಟ್ಟು(ಬೆವಿಕಂ) | 4,16,733 | 3,32,527 | 84,206 |
| **ಚಾವಿಸನಿನಿ** | | | | |
| 1 | ಮೈಸೂರು | 73,440 | 73,186 | 254 |
| 2 | ಚಾಮರಾಜನಗರ | 20,599 | 20,343 | 256 |
| 3 | ಕೊಡಗು | 6,042 | 6,042 | 0 |
| 4 | ಮಂಡ್ಯ | 53,773 | 51,086 | 2,687 |
| 5 | ಹಾಸನ | 75,685 | 72,184 | 3,501 |
| | ಒಟ್ಟು(ಚಾವಿಸನಿನಿ) | 2,29,539 | 2,22,841 | 6,698 |
| **ಹೆಸ್ಕಾಂ** | | | | |
| 1 | ಧಾರವಾಡ | 20,890 | 15,079 | 5,811 |
| 2 | ಗದಗ | 17,057 | 9,516 | 7,541 |
| 3 | ಹಾವೇರಿ | 52,268 | 26,748 | 25,520 |
| 4 | ಉತ್ತರ ಕನ್ನಡ | 37,671 | 34,264 | 3,407 |
| 5 | ಬೆಳಗಾವಿ | 1,49,495 | 1,19,396 | 30,099 |
| 6 | ವಿಜಯಪುರ | 1,06,894 | 78,120 | 28,774 |
| 7 | ಬಾಗಲಕೋಟ | 54,422 | 50,299 | 4,123 |
| | ಒಟ್ಟು( ಹೆಸ್ಕಾಂ ) | 4,38,697 | 3,33,422 | 1,05,275 |

| ಕ್ರ. ಸಂ. | ಜಿಲ್ಲೆಗಳ ಹೆಸರು | 2005 ರಿಂದ 22-09-2023 ರವರೆಗೆ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಹಣ ಪಾವತಿಸಿರುವ ಅರ್ಜಿದಾರರ ಸಂಖ್ಯೆ | 31-07-2025 ರ ಅಂತ್ಯಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲಾಗಿರುವ ಕೃಷಿ ಪಂಪ್‌ಸೆಟ್‌ಗಳ ಸಂಖ್ಯೆ | ಮೂಲಭೂತ ಸೌಕರ್ಯ ಕಲ್ಪಿಸಲು 31-07-2025 ರ ಅಂತ್ಯಕ್ಕೆ ಬಾಕಿ ಇರುವ ಕೃಷಿ ಪಂಪ್‌ಸೆಟ್‌ಗಳ ಸಂಖ್ಯೆ |
|---|---|---|---|---|
| | | **ಮೆಸ್ಕಾಂ** | | |
| 1 | ದಕ್ಷಿಣ ಕನ್ನಡ | 68,048 | 68,017 | 31 |
| 2 | ಉಡುಪಿ | 24,419 | 24,398 | 21 |
| 3 | ಶಿವಮೊಗ್ಗ | 64,864 | 51,369 | 13,495 |
| 4 | ಚಿಕ್ಕಮಗಳೂರು | 32,715 | 23,608 | 9,107 |
| | ಒಟ್ಟು(ಮೆಸ್ಕಾಂ) | 1,90,046 | 1,67,392 | 22,654 |
| | | **ಜೆಸ್ಕಾಂ** | | |
| 1 | ಕಲಬುರಗಿ | 17,711 | 16,435 | 1,276 |
| 2 | ಯಾದಗಿರ | 9,545 | 8,587 | 958 |
| 3 | ಬೀದರ್ | 15,660 | 14,611 | 1,049 |
| 4 | ರಾಯಚೂರು | 4,589 | 4,529 | 60 |
| 5 | ಕೊಪ್ಪಳ | 12,548 | 12,451 | 97 |
| 6 | ಬಳ್ಳಾರಿ | 2,275 | 2,103 | 172 |
| 7 | ವಿಜಯನಗರ | 10,264 | 8,863 | 1,401 |
| | ಒಟ್ಟು(ಜೆಸ್ಕಾಂ) | 72,592 | 67,579 | 5,013 |
| | **ಒಟ್ಟು** | **13,47,607** | **11,23,761** | **2,23,846** |